ಟನ್ ಕಸ ಕಡ್ಡಿ ತೆಗೆದು ಹೊರಗೆ ಹಾಕುವುದಕ್ಕೆ, ಆರೋಗ್ಯ ಇಲಾಖಾಧಿಕಾರಿಗಳು ಆರು ಸಾವಿರ ಪೌರ ಕಾರ್ಮಿಕರನ್ನು ಇಟ್ಟುಕೊಂಡು ಅದನ್ನು ತೆಗೆಯುತ್ತಿದ್ದಾರೆ. ಆ ಸೆಲ್ ಮಾಡಿದ ಉದ್ದೇಶ ಏನು ಅಂತ ಸರ್ಕಾರದ ಗಮನಕ್ಕೆ ಬಂದಿದೆ. ಒಂದು 9ಜನ ಇಂಜಿನೀಯರ್ಸ್ಗೆ ಕೆಲಸ ಕೊಡುವುದು. ಇಡೀ ಭಾರತದಲ್ಲಿ ಯಾವ ವಿಶ್ವವಿದ್ಯಾನಿಲಯದಲ್ಲೂ ಕೂಡ ಇಂಜನೀಯರ್ಸ್ಗೆ ಕಸ ಕಡ್ಡಿ ತೆಗೆಯುವುದು ಹೊರಗೆ ಹಾಕುವುದು ಈ ರೀತಿ ವಿದ್ಯೆ ಕಲಿಸಿಲ್ಲ. ಆದರೆ ಇವರು ರೆಜಲೂಶನ್ ಮಾಡಿ ಕಳುಹಿಸಿದ್ದಾರೆ. ಇದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ, ಇದನ್ನು ರಿಜೆಕ್ಟ್ ಮಾಡಿ ಕಳುಹಿಸುತ್ತೇವೆ. ಇನ್ನೊಂದು ಹೇಳಿದರು ಬೆಂಗಳೂರಿನಲ್ಲಿ ಮ್ಯಾನ್-ಹೋಲ್ಸ್ ಎಲ್ಲಾ ಕಟ್ಟಿ ಕೊಂಡಿದೆ ಹೋಲ್ಗಳು ಮತ್ತು ಸ್ಯಾನಿಟೇಶನ್ ಕೆಲಸವನ್ನು ಬೆಂಗಳೂರು ವಾಟರ್ ಸಪ್ಲೈ ಅಂಡ್ ಸಿವರೇಜ್ ಬೋರ್ಡ್ನವರು ಮಾಡುತ್ತಿದ್ದಾರೆ? ಕಾರ್ಪೊರೇಷನ್ನಲ್ಲಿ ಆ ಕೆಲಸ ಮಾಡುತ್ತಿಲ್ಲ ಈ ಸ್ಯಾನಿಟರಿ ಇಂಜಿನೀಯರಿಂಗ ಸೆಲ್ ಕಾರ್ಪೋರೇಶನ್ನ ಅವಶ್ಯಕತೆ ಇಲ್ಲ ಆದಷ್ಟು ಬೇಗ ಫೈಲ್ ಬಂದ ತಕ್ಷಣ ರಿಜೆಕ್ಟ್ ಮಾಡಿ ಕಳುಹಿಸುತ್ತಿದ್ದೇನೆ.

ಅಧ್ಯಕ್ಷರು : ಪ್ರಶ್ನೋತ್ತರ ವೇಳೆ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ ಎರಡೇ ಎರಡು ಪ್ರಶ್ನೆಗಳು ಇವೆ ನನಗೆ ಅವಕಾಶ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಬೆಳಗ್ಗೆಯಿಂದ ಕೇಳುತ್ತಿದ್ದಾರೆ, ಎರಡೇ ಎರಡು ಪ್ರಶ್ನೆಗಳು ಇವೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ನಾನು ಬೆಳಗ್ಗೆಯಿಂದ ಹೇಳುತ್ತಿದ್ದೇನೆ. ಒಂದೊಂದೂ ಪ್ರಶ್ನೆಗೆ 15-20 ನಿಮಿಷ ತೆಗೆದುಕೊಂಡರೆ ಹೇಗೆ? ತಾವೆಲ್ಲ ನನಗೆ ಸಹಕಾರ ಕೊಡಬೇಕು ಇಲ್ಲದಿದ್ದರೆ ಆಗುವುದಿಲ್ಲ.

ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

453 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆಯ ಮಂಜೂರಾಗಿದ್ದು ಆದು ಯಾವ ಹಂತದಲ್ಲಿದೆ?

ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು? ಹಾಗೂ ಖರ್ಚಾಗಿರುವ ಹಣವೆಷ್ಟು?

ಇ) ಈ ಯೋಜನೆಯು ಯಾವಾಗ ಪೂರ್ಣಗೊಳ್ಳುತ್ತದೆ?

ಶ್ರೀ. ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು) :

ಅ) ಈ ಕೆಲಸವು ಈಗ ಪ್ರಗತಿಯಲ್ಲಿದ್ದು, ಯೋಜನೆಯನ್ನು 1995ನೇ ಮಾರ್ಚ್ ತಿಂಗಳ ಅಂತ್ಯದೊಳಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಆ) ಈ ಯೋಜನೆಗೆ ಮಂಜೂರಾದ ಹಣ ರೂ. 250.00 ಲಕ್ಷಗಳು, ಖರ್ಚಾದ ಹಣ ರೂ. 336.57 ಲಕ್ಷಗಳು

ಇ) ಈ ಯೋಜನೆಯನ್ನು ಮಾರ್ಚ್ 1995ರ ವೇಳೆಗೆ ಚಾಲು ಮಾಡಲು ಉದ್ದೇಶಿಸಲಾಗಿದೆ.

ಶ್ರೀ ಹಂಪನಗೌಡ : ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಸಿಂಧನೂರು ಪಟ್ಟಣದ ಕುಡಿಯುವ ನೀರಿನ ಯೋಜನೆ ಬಗ್ಗೆ. ಈ ಯೋಜನೆಯಡಿಯಲ್ಲಿ ತೆಗೆದುಕೊಂಡಂತಹ

ಕಾಮಗಾರಿಗಳು ಯಾವುವು? ಯಾವ ಯಾವ ಕಾಮಗಾರಿಗಳು ಪೂರ್ಣಗೊಂಡಿವೆ. ಯಾವ ಕಾಮಗಾರಿಗಳು ಅಪೂರ್ಣವಾಗಿವೆ? ಇದಕ್ಕೆ ಖರ್ಚು ಮಾಡಿರತಕ್ಕಂಥ ಹಣ ಎಷ್ಟು ಮತ್ತು ಈ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸುತ್ತೀರಿ? ಇದರಲ್ಲಿ ಅವರು ಈ ಯೋಜನೆಗೆ ಬೇಕಾಗಿರತಕ್ಕಂಥ ಅಂದಾಜು ಮೊತ್ತ 250 ಲಕ್ಷ ಎಂದು ಹೇಳಿದ್ದಾರೆ. ಈಗಾಗಲೇ 336 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದ್ದಾರೆ. ಆದರೆ ಈ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ ಆದ್ದರಿಂದ ಸನ್ಮಾನ್ಯ ಮಂತ್ರಿಗಳು ಈ ಯೋಜನೆಯಲ್ಲಿ ಅಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ವಿವರ ಪೂರ್ಣಗೊಂಡಿರತಕ್ಕಂಥ ಕಾಮಗಾರಿಗಳ ವಿವರ ಹೇಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಸರ್ಕಾರ ಮಂಜೂರಾತಿ ನೀಡಿರುವಂತಹ ಸಂದರ್ಭದಲ್ಲಿ 250 ಲಕ್ಷ ರೂಪಾಯಿಗಳಿಗೆ ಮಂಜೂರಾತಿ ನೀಡಿರುವುದು ಸರಿಯಷ್ಟೇ. ಆದರೆ ಪ್ರತಿನಿತ್ಯ ಬೇಕಾದಂತಹ ಸಾಮಗ್ರಿಗಳ ಪದಾರ್ಥಗಳ ಬೆಲೆ ಏರಿಕೆ ಆಗಿರುವುದರಿಂದ ಅದರ ಅಂದಾಜು ವೆಚ್ಚವು 336.57 ಲಕ್ಷಕ್ಕೆ ಏರಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಈ ಕುಡಿಯುವ ನೀರಿನ ಯೋಜನೆಗಾಗಿ 336 ಲಕ್ಷ ರೂಪಾಯಿಗಳಷ್ಟು ಹಣ ಖರ್ಚು ಮಾಡಿದ್ದೇವೆ. ಈ ಯೋಜನೆಯನ್ನು 1995ರ ಮಾರ್ಚ್ ಒಳಗೆ ಪೂರ್ಣಗೊಳಿಸುವಂತಹ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಇನ್ನು ಆಗಬೇಕಾದಂತಹ ಕೆಲಸಗಳಲ್ಲಿ ಓವರ್ ಹೆಡ್ ಟ್ಯಾಂಕ್ ಎಂದು ಏನು ಹೇಳುತ್ತೇವೆ ಆ ಓವರ್ ಹೆಡ್ ಟ್ಯಾಂಕ್‌ನ ಕೆಲಸ ಪೂರ್ಣ ಆಗಿದೆ. ಜೊತೆಗೆ ನೀರು ಸಂಗ್ರಹಿಸುವಂತಹ ತೊಟ್ಟಿ ಕೆಲಸ ಏನು ಆಗಬೇಕಾಗಿದೆ ಆ ಕೆಲಸ ಕೂಡ ಆಗಿದೆ. ಹೆಚ್ಚು ಕಡಿಮೆ 17 ಕಿಲೋಮೀಟರ್ ಕೊಳವೆಗಳನ್ನು ನಾವು ಅಳವಡಿಸಬೇಕಾಗಿದೆ. ಇದರಲ್ಲಿ ನಾವು 2600 ಮೀಟರ್‌ನಷ್ಟು ಪೈಪ್‌ಗಳನ್ನು ಸರಬರಾಜು ಮಾಡಲಾಗಿದೆ. ಇದರಲ್ಲಿ ನಾವು 1250 ಮೀಟರ್‌ನಷ್ಟು ಪೈಪ್‌ಗಳನ್ನು ಹಾಕಲಾಗಿದೆ. ಇನ್ನು ಉಳಿದ ಪೈಪ್‌ಗಳ ಸಂಗ್ರಹಣೆ ಮಾಡಿ 1995ನೇ ಮಾರ್ಚ್ ಒಳಗಡೆ ಕುಡಿಯುವ ನೀರಿನ ಸರಬರಾಜು ಈ ಪಟ್ಟಣಕ್ಕೆ ಕೊಡುತ್ತೇವೆ ಎಂದು ಭರವಸೆ ಕೊಡುತ್ತೇನೆ.

ಶ್ರೀ ಹಂಪನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೇ ಇಷ್ಟು ವಿಳಂಬವಾಗಿ ಈ ಯೋಜನೆ ಸಾಗುತ್ತಿದೆ. ಇದಕ್ಕೆ ಅತಿ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಸರ್ಕಾರದ ಮೂಲ ಉದ್ದೇಶ ಇರತಕ್ಕಂಥಾದ್ದು ಕುಡಿಯುವ ನೀರನ್ನು ಒದಗಿಸುವಂಥಾದ್ದು. ಸರ್ಕಾರ ಯಾವ ಕಾಮಗಾರಿ ಮೊದಲು ತೆಗೆದುಕೊಳ್ಳಬೇಕು ಎಂದು ಹೇಳುವಂಥಾದ್ದು ತಾಂತ್ರಿಕ ತಜ್ಞರು ಹೇಳಬೇಕಾದಂತಹ ವಿಷಯ. ಕೇಸಿಂಗ್ ಪೈಪ್ ಮೊದಲು ಮಾಡಿ ಶುದ್ಧವಾದ ಫಿಲ್ಟರ್ ಬೆಡ್ ಮಾಡಿ ನೀರು ಕೊಟ್ಟಿದ್ದರೆ ಈ ಸಮಸ್ಯೆ ಉದ್ಭವವಾಗುತ್ತಿರಲಿಲ್ಲ. ಆದರೆ ಇವರು ಇಂಪೋರ್ಟಿಂಗ್ ರಿಜರ್‌ವಾಯರ್ ಕೆರೆ ಕೆಲಸ ಇನ್ನಿತರೆ ಬೇರೆ ಬೇರೆ ಕೆಲಸಗಳನ್ನು ಮಾಡಿ 5 ವರ್ಷ ವಿಳಂಬವಾಗಿದೆ. ಅಲಕ್ಷ್ಯತನದಿಂದ ಈ ರೀತಿ ಆಗಿದೆ ಎಂದು ನಾನು ನೇರವಾಗಿ ಆರೋಪ ಮಾಡುತ್ತಿದ್ದೇನೆ. ಮೊದಲು ಈ ಕೇಸಿಂಗ್ ಪೈಪ್‌ಗಳನ್ನು ಸಪ್ಲೈ ಮಾಡುವುದಕ್ಕೆ ಹೆಚ್ಚು ಒತ್ತಡ ಕೊಡಬೇಕು, ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ, ಬೇಗನೆ ಮಾಡಿಸಿಕೊಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿದ ಹಾಗೆ ಈ ಯೋಜನೆಗಳು ನಿಧಾನವಾಗುವುದಕ್ಕೆ ಕಾರಣಗಳು ಏನು ಅಂದರೆ ಟೆಂಡರ್ ಕರೆಯುವಂತಹ ಸಂದರ್ಭದಲ್ಲಿ ವಿಳಂಬವಾಗಿದೆ. ಮಾನ್ಯ ಶಾಸಕರು ಹೇಳಿದ ಹಾಗೆ ತುರ್ತಾಗಿ ಕುಡಿಯುವ ನೀರನ್ನು ಒದಗಿಸಿಕೊಡುವಂಥದ್ದು ನಾನು ಹೇಳಿದಂತಹ ನಿಗಧಿತ ತಾರೀಖಿನೊಳಗೆ ವ್ಯವಸ್ಥೆ ಮಾಡಿಕೊಡುತ್ತೇನೆಂದು ಭರವಸೆ ಕೊಡುತ್ತೇನೆ.